

# ಸೋಂಕಿತ ವ್ಯಕ್ತಿಯ ಮೇಲೆ ಬ್ಲೀಚ್

## ಸಿಂಪಡಿಸುವುದರಿಂದ ಸಾರ್ಸ್-ಕೋವಿ-2 ನಾಶವಾಗುತ್ತದೆಯೇ?

ಬ್ಲೀಚ್ (ಸೋಡಿಯಮ್ ಅಥವಾ ಕ್ಯಾಲ್ಸಿಯಂ ಹೈಪೋಕ್ಲೋರೈಟ್) ಒಂದು ಸಾಮಾನ್ಯವಾದ, ಅಗ್ಗವಾದ, ಸಾಧಾರಣವಾಗಿ ಯಾವುದೇ ಅಪಾಯವಿಲ್ಲದ, ಮತ್ತು ವ್ಯಾಪಕವಾಗಿ ಉಪಯೋಗಿಸಲ್ಪಡುವ ಸೋಂಕುನಾಶಕ. ವೈರಸ್‌ನಿಂದ ಕಲುಷಿತಗೊಂಡಿರುವ ಹೊರ ಮೇಲ್ಮೈಗಳನ್ನು ಸ್ವಚ್ಛಗೊಳಿಸಲು ಇದನ್ನು ಬಳಸಬಹುದು. ಸೋಪ್ ಅಥವಾ ನೀರು ಇಲ್ಲದ ಸಂದರ್ಭಗಳಲ್ಲಿ, ಬ್ಲೀಚ್‌ನ ಸಾರರಿಕ್ತ (0.05% ಸಾರಹೊಂದಿದ) ದ್ರಾವಣವನ್ನು ಕೈಗಳ ಸೋಂಕು ನಿವಾರಣೆಗೂ ಬಳಸಬಹುದು.

ಆದಾಗ್ಯೂ, ಇದನ್ನು (ಅಥವಾ ಇನ್ನಾವುದೇ ರಾಸಾಯನಿಕ ಸೋಂಕು ನಿವಾರಕಗಳನ್ನು) ಜನರ ಮೇಲೆ ಅಥವಾ ಜನರ ಗುಂಪಿನ ಮೇಲೆ (ಉದಾಹರಣೆಗೆ ಸೋಂಕು ನಿವಾರಕ ಸುರಂಗಗಳಲ್ಲಿ) ಸಿಂಪಡಿಸುವುದನ್ನು ಶಿಫಾರಸು ಮಾಡುವುದಿಲ್ಲ. ಬ್ಲೀಚ್ ಅನ್ನು ದೇಹದ ಮೇಲೆ ಸಿಂಪಡಿಸುವುದರಿಂದ ಸಾರ್ಸ್–ಕೋವಿ–2 ಸೋಂಕಿತ ವ್ಯಕ್ತಿಯ ಒಳಗಿರುವ ವೈರಸ್‌ಗಳು ನಾಶವಾಗುವುದಿಲ್ಲ. ಆದರೆ, 0.05% ಅಷ್ಟು ಸಾರ ಹೊಂದಿರುವ ಬ್ಲೀಚ್‌ನ ದ್ರಾವಣವು ಕೂಡ ಚರ್ಮದ ಉರಿಯೂತ (ಡರ್ಮಟೈಟಿಸ್) ಮತ್ತು ಆಸ್ತಮಾಗಳನ್ನು ಉಂಟುಮಾಡಬಹುದು. 1% ಗೂ ಹೆಚ್ಚಿನ ಸಾರದ ದ್ರಾವಣವು ಕಣ್ಣು, ಗಂಟಲು, ಮತ್ತು ಚರ್ಮವನ್ನು ಬಾಧಿಸುತ್ತದೆ.

**ಟಿಪ್ಪಣಿ:**

1. ಇಂಡಿಯನ್ ಸೈಂಟಿಸ್ಟ್ಸ್ ರೆಸ್ಪಾನ್ಸ್ ಟು ಕೋವಿಡ್–19 (ಐಎಸ್ಆರ್‌ಸಿ) ಜಾಲತಾಣದಲ್ಲಿ ಈ ಪ್ರತಿಕ್ರಿಯೆಗಳನ್ನು ಮೊದಲು ಪ್ರಕಟಿಸಲಾಗಿತ್ತು.
2. ಈ ಲೇಖನದ ಶೀರ್ಷಿಕೆಯಲ್ಲಿ ಹಿನ್ನೆಲೆಯಾಗಿ ಬಳಸಿರುವ ಚಿತ್ರದ ಆಕರ: https://pixabay.com/photos/coronavirus-corona-virus-covid-19-4958989/.

ಕೃಪೆ: thiagolazarino, Pixabay. License: CC-0.

**ಇಂಡಿಯನ್ ಸೈಂಟಿಸ್ಟ್ಸ್ ರೆಸ್ಪಾನ್ಸ್ ಟು ಕೋವಿಡ್–19 (ಐಎಸ್ಆರ್‌ಸಿ)** ಎಂಬುದು ಸುಮಾರು ಐನೂರು ಭಾರತೀಯ ವಿಜ್ಞಾನಿಗಳು, ಎಂಜಿನಿಯರ್‌ಗಳು, ತಂತ್ರಜ್ಞರು, ವೈದ್ಯರು, ಸಾರ್ವಜನಿಕ ಆರೋಗ್ಯ ತಜ್ಞರು, ವಿಜ್ಞಾನ ಸಂವಹನಕಾರರು, ಪತ್ರಕರ್ತರು ಮತ್ತು ವಿದ್ಯಾರ್ಥಿಗಳು ಸೇರಿ ಪ್ರಪಂಚದಾದ್ಯಂತ ಹರಡಿರುವ ಕೋವಿಡ್–19ಗೆ ಪ್ರತಿಸ್ಪಂದಿಸಿ ಸ್ವಯಿಚ್ಛೆಯಿಂದ ರಚಿಸಿಕೊಂಡ ಗುಂಪು. ಈ ಗುಂಪಿನ ಮಿಂಚಂಚೆ indscicov@gmail.com.

ಅನುವಾದ: **ಜನಾರ್ಧನ ಚನ್ನಗಿರಿ** । ಪರಿಶೀಲನೆ: **ಮಧುಕರ ಪುಟ್ಟಿ**